(ಲಕ್ಷಗಳಲ್ಲಿ)

ಕ್ರ. ಸಂ.	ವರ್ಷ	ಯೋಜನೆ	ಕಾಮಗಾರಿ	ಮಾಡಲಾದ ವೆಚ್ಚ
1.	2000-01	ವಿಶೇಷ ಘಟಕ ಯೋಜನೆ	ಬಸಿಗಾಲುವೆ (ಹೆ)	0.188
2.	2001-02	ಉದ್ಯೋಗ ಭರವಸೆ ಯೋಜನೆ	ಅಲ್ಪ ಆಳದಬಾವಿ	0.327
			ಬಸಿಗಾಲುವೆ	1.516
3.		ಬರ ಪರಿಹಾರ ಯೋಜನೆ	ಬಸಿಗಾಲುವೆ	0.867
4.		ಕಾಡಾ ಯೋಜನೆ	ಬಸಿಗಾಲುವೆ	21.376
5.	2002-03	-	ಇಲ್ಲ	-
			ಒಟ್ಟು	24.274

ಸಾಮಿಲ್ ವರ್ಗಾವಣೆಗೆ ಸಂಬಂಧಪಟ್ಟಂತೆ

2212 (2657) ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ): ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸಾಮಿಲ್‌ಗಳ ಪರವಾನಗಿ ಸಂಖ್ಯೆ ಎಷ್ಟು; (ವಿವರವಾರು ಒದಗಿಸುವುದು);

ಆ) 2000ನೇ ಸಾಲಿನಿಂದ ಇಲ್ಲಿಯವರೆಗೆ ಸಾಮಿಲ್ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಎಷ್ಟು ಮಂದಿಗೆ ಪರವಾನಗಿಯನ್ನು ಇದುವರೆಗೂ ಮಂಜೂರು ಮಾಡಲಾಗಿದೆ; ಎಷ್ಟು ಅರ್ಜಿಗಳು ಪೆಂಡಿಂಗ್ ಇದೆ; ಕಾರಣವೇನು; (ಜಿಲ್ಲಾವಾರು ವಿವರ ಒದಗಿಸುವುದು);

ಇ) ಸಾಮಿಲ್ ಶಿಫ್ಟಿಂಗ್ ಮಾಡಲು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಪರವಾನಗಿಯನ್ನು ಸ್ಥಳ ಬದಲಾವಣೆಗಾಗಿ ಕೋರಿ ಬಂದಿರುವ ಅರ್ಜಿ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು);

ಈ) ಸಾಮಿಲ್ ಶಿಫ್ಟಿಂಗ್‌ಗಾಗಿ ಬಂದ ಅರ್ಜಿಗಳಲ್ಲಿ ಯಾವ ಯಾವ ಸಾಮಿಲ್‌ಗಳಿಗೆ ಬದಲಾವಣೆ ಮಾಡಿಕೊಳ್ಳಲು ನೀಡಿರುವ ಅನುಮತಿಯ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ಒದಗಿಸುವುದು);

ಉ) ಸಾಮಿಲ್ ವರ್ಗಾವಣೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು; ಎಷ್ಟು ಸಾಮಿಲ್‌ಗಳನ್ನು ವರ್ಗಾವಣೆ ಮಾಡಲಾಗಿದೆ; (ಜಿಲ್ಲಾವಾರು ವಿವರ ಒದಗಿಸುವುದು);

ಊ) ಹೊಸದಾಗಿ ಸಾಮಿಲ್ ತೆರೆಯಲು ವಿಧಿಸುವ ನಿಬಂಧನೆಗಳೇನು?

ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು): ಅ) ರಾಜ್ಯದಲ್ಲಿರುವ ಪರವಾನಗಿ ನೀಡಿರುವ ಸಾಮಿಲ್‌ಗಳ ಸಂಖ್ಯೆ 3255. ಅವುಗಳ ವಿವರಗಳನ್ನು ಅನುಬಂಧ 1ರಲ್ಲಿ ನೀಡಿದೆ.

ಆ) 2000ನೇ ಸಾಲಿನಿಂದ ಇಲ್ಲಿಯವರೆಗೆ ಬಂದಿರುವ ಅರ್ಜಿ ಸಂಖ್ಯೆ 376. ಇವುಗಳಲ್ಲಿ ಪರವಾನಗಿ ಮಂಜೂರು ಆಗಿರುವ ಸಂಖ್ಯೆ 218. ಬಾಕಿ ಇರುವ ಅರ್ಜಿಗಳು 158.

ಬಾಕಿ ಇರಲು ಕಾರಣ:-

1. ಸಾಮಿಲ್ ಪರವಾನಗಿ ಕೋರಿ ಅರ್ಜಿದಾರರು ಸಲ್ಲಿಸಿರುವ ಸ್ಥಳವು ಹತ್ತಿರದ ಅರಣ್ಯ ಪ್ರದೇಶದಿಂದ 10 ಕಿ.ಮೀ. ಕಿಂತಲೂ ಕಡಿಮೆ ದೂರದಲ್ಲಿರುವುದು.

2. ಸೆಂಟ್ರಲ್ ಎಂಪವರ್ ಕಮಿಟಿಗೆ ಅನುಮೋದನೆಗಾಗಿ ಕಳುಹಿಸುವುದು.

3. ಅರ್ಜಿಗಳು ಪರಿಶೀಲನಾ ಹಂತದಲ್ಲಿರುವುದು.

ಅವುಗಳ ಜಿಲ್ಲಾವಾರು ವಿವರವನ್ನು ಅನುಬಂಧ-2ರಲ್ಲಿ ನೀಡಿದೆ.

ಇ) 109. ಅವುಗಳ ಜಿಲ್ಲಾವಾರು ವಿವರವನ್ನು ಅನುಬಂಧ-3ರಲ್ಲಿ ನೀಡಿದೆ.

ಈ) 86. ಅವುಗಳ ಜಿಲ್ಲಾವಾರು ವಿವರವನ್ನು ಅನುಬಂಧ-4ರಲ್ಲಿ ನೀಡಿದೆ.

ಉ) ಸಾಮಿಲ್ ವರ್ಗಾವಣೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆಗಳು 73, ವರ್ಗಾವಣೆ ಮಾಡಲಾಗಿರುವ ಸಾಮಿಲ್‌ಗಳ ಸಂಖ್ಯೆ 43. ಅವುಗಳ ಜಿಲ್ಲಾವಾರು ವಿವರವನ್ನು ಅನುಬಂಧ-5ರಲ್ಲಿ ನೀಡಿದೆ.

ಊ) ಹೊಸದಾಗಿ ಸಾಮಿಲ್‌ಗಳನ್ನು ತೆರೆಯಲು ಈ ಕೆಳಕಂಡ ನಿಬಂಧನೆಗಳನ್ನು ವಿಧಿಸಲಾಗುವುದು.

1. ನಿಗಧಿತ ಶುಲ್ಕ ಪಾವತಿಸುವುದು.

2. ಉದ್ದೇಶಿತ ಸಾಮಿಲ್ ಸ್ಥಾಪಿಸಬೇಕಾದ ಸ್ಥಳದ ಬಗ್ಗೆ ದಾಖಲೆ ಪತ್ರಗಳನ್ನು ಸಲ್ಲಿಸುವುದು.

3. ವಾಣಿಜ್ಯ ತೆರಿಗೆ ಇಲಾಖೆಯಿಂದ ಪಡೆದ ನೋಂದಣಿ ಪತ್ರಗಳನ್ನು ಸಲ್ಲಿಸುವುದು.

4. ಸಣ್ಣ ಕೈಗಾರಿಕೆ ಉದ್ದಿಮೆ ಇಲಾಖೆಯಿಂದ ಪಡೆದ ಸಾಮಿಲ್ ಸ್ಥಾಪನೆ ಮಾಡುವ ನೋಂದಣಿ ಪತ್ರವನ್ನು ಸಲ್ಲಿಸುವುದು.

5. ಗ್ರಾಮ ಪಂಚಾಯತ್ ಅಥವಾ ಇತರೆ ಸಂಬಂಧಿಸಿದ ಸ್ಥಳೀಯ ಸಂಸ್ಥೆಗಳಿಂದ ನಿರೀಕ್ಷಣಾ ಪತ್ರ ಪಡೆದು ಸಲ್ಲಿಸುವುದು.

6. ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮದಿಂದ ವಿದ್ಯುತ್ ಸರಬರಾಜು ಬಗ್ಗೆ ಒಪ್ಪಿಗೆ ಪತ್ರ ಪಡೆದು ಸಲ್ಲಿಸುವುದು.

ಇವುಗಳಲ್ಲದೆ, ಮಾನ್ಯ ಸರ್ವೋಚ್ಚ ನ್ಯಾಯಾಲಯದ ಈ ಕೆಳಕಂಡ ನಿಬಂಧನೆಗಳಿಗೂ ಸಹಾ ಒಳಪಡಬೇಕು.

1. ಹೊಸದಾಗಿ ಸಾಮಿಲ್ ತೆರೆಯಲು ಸರ್ಕಾರಿ ಪತ್ರ ಸಂಖ್ಯೆ ಅಪಜೀ 156 ಎಫ್‌ಡಿಪಿ 97, ದಿನಾಂಕ 21/1/98ರ ಪ್ರಕಾರ ಯಾವುದೇ ಅರಣ್ಯ ಪ್ರದೇಶದ ಸರಹದ್ದಿನಿಂದ 10 ಕಿ.ಮೀ. ಹೊರಗಡೆ ಇದ್ದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೊಳಪಟ್ಟು ಪರವಾನಗಿಯನ್ನು ನೀಡಬಹುದಾಗಿದೆ.

2. ನ್ಯಾಯಾಲಯದ ಆದೇಶದ ಪ್ರಕಾರ ಹೊಸ ಸಾಮಿಲ್ ಸ್ಥಾಪಿಸಲು 'ಸೆಂಟ್ರಲ್ ಎಂಪವರ್ಡ್ ಕಮಿಟಿ'ಯ ಪೂರ್ವಾನುಮತಿ ಪಡೆಯಬೇಕು.

ಪ್ರಶ್ನೆ ಸಂಖ್ಯೆ 2657 ಅನುಬಂಧ 1

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಾಮಿಲ್‌ಗಳ ಸಂಖ್ಯೆ
1.	ಬೆಂಗಳೂರು (ನಗರ)	450
2.	ಬೆಂಗಳೂರು (ಗ್ರಾಮಾಂತರ)	129
3.	ಕೋಲಾರ	97
4.	ದಾವಣಗೆರೆ	72
5.	ಚಿತ್ರದುರ್ಗ	73
6.	ಬಳ್ಳಾರಿ	81
7.	ಕೊಪ್ಪಳ	49
8.	ಬೆಳಗಾವಿ	321
9.	ಬಾಗಲಕೋಟೆ	130
10.	ಬಿಜಾಪುರ	155
11.	ಮೈಸೂರು	261
12.	ಮಂಡ್ಯ	18
13.	ಕೊಡಗು	21
14.	ಉಡುಪಿ	91
15.	ಮಂಗಳೂರು	21
16.	ಶಿವಮೊಗ್ಗ	95
17.	ಉತ್ತರ ಕನ್ನಡ	80
18.	ಚಾಮರಾಜನಗರ	23
19.	ಚಿಕ್ಕಮಗಳೂರು	60
20.	ಹಾಸನ	114
21.	ತುಮಕೂರು	164
22.	ಗುಲ್ಬರ್ಗಾ	198
23.	ಬೀದರ್	157
24.	ರಾಯಚೂರು	47
25.	ಧಾರವಾಡ	142
26.	ಗದಗ	46
27.	ಹಾವೇರಿ	55
	ಒಟ್ಟು	3255

ಪ್ರಶ್ನೆ ಸಂಖ್ಯೆ 2657 ಅನುಬಂಧ 2

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬಂದಿರುವ ಅರ್ಜಿಗಳು	ಪರವಾನಗಿ ನೀಡಿದ್ದು	ಬಾಕಿ ಇರುವುದು
1.	ಬೆಂಗಳೂರು (ನಗರ)	41	41	-
2.	ಬೆಂಗಳೂರು (ಗ್ರಾಮಾಂತರ)	18	13	5
3.	ಕೋಲಾರ	5	3	2
4.	ಬಳ್ಳಾರಿ	1	1	-
5.	ಚಿತ್ರದುರ್ಗ	5	3	2
6.	ದಾವಣಗೆರೆ	2	-	2
7.	ಕೊಪ್ಪಳ	5	5	-
8.	ಬೆಳಗಾವಿ	17	2	15
9.	ಬಾಗಲಕೋಟೆ	35	24	11
10.	ಬಿಜಾಪುರ	50	34	16
11.	ಮೈಸೂರು	30	-	30
12.	ಮಂಡ್ಯ	18	-	18
13.	ಕೊಡಗು	1	-	1
14.	ಮಂಗಳೂರು	31	31	-
15.	ಉಡುಪಿ	1	1	-
16.	ಶಿವಮೊಗ್ಗ	9	2	7
17.	ಉತ್ತರ ಕನ್ನಡ	16	7	9
18.	ಚಾಮರಾಜನಗರ	1	-	1
19.	ಚಿಕ್ಕಮಗಳೂರು	1	-	1
20.	ಹಾಸನ	9	2	7
21.	ತುಮಕೂರು	7	-	7
22.	ಬೀದರ್	22	3	19
23.	ಗುಲ್ಬರ್ಗಾ	28	28	-
24.	ರಾಯಚೂರು	6	3	3
25.	ಧಾರವಾಡ	13	13	-
26.	ಗದಗ	4	2	2
27.	ಹಾವೇರಿ	-	-	-
	ಒಟ್ಟು	**376**	**218**	**158**

ಅನುಬಂಧ 3

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಪರವಾನಗಿ ಬದಲಾವಣೆ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ
1.	ಬೆಂಗಳೂರು (ನಗರ)	4
2.	ಬೆಂಗಳೂರು (ಗ್ರಾಮಾಂತರ)	3
3.	ಕೋಲಾರ	3
4.	ಬಳ್ಳಾರಿ	4
5.	ಚಿತ್ರದುರ್ಗ	-
6.	ದಾವಣಗೆರೆ	2
7.	ಕೊಪ್ಪಳ	3
8.	ಬೆಳಗಾವಿ	14
9.	ಬಾಗಲಕೋಟೆ	9
10.	ಬಿಜಾಪುರ	16
11.	ಮೈಸೂರು	9
12.	ಮಂಡ್ಯ	5
13.	ಕೊಡಗು	2
14.	ಮಂಗಳೂರು	-
15.	ಉಡುಪಿ	-
16.	ಶಿವಮೊಗ್ಗ	1
17.	ಚಿಕ್ಕಮಗಳೂರು	2
18.	ಉತ್ತರ ಕನ್ನಡ	1
19.	ಚಾಮರಾಜನಗರ	-
20.	ಹಾಸನ	7
21.	ತುಮಕೂರು	4
22.	ಬೀದರ್	3
23.	ಗುಲ್ಬರ್ಗಾ	12
24.	ರಾಯಚೂರು	-
25.	ಧಾರವಾಡ	1
26.	ಗದಗ	2
27.	ಹಾವೇರಿ	2
	ಒಟ್ಟು	**109**

ಅನುಬಂಧ 4

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಾಮಿಲ್ಲುಗಳಿಗೆ ಬದಲಾವಣೆ ಮಾಡಿಕೊಳ್ಳಲು ನೀಡಿರುವ ಅನುಮತಿ ಸಂಖ್ಯೆ	ಬಾಕಿ
1.	ಬೆಂಗಳೂರು (ನಗರ)	-	-
2.	ಬೆಂಗಳೂರು (ಗ್ರಾಮಾಂತರ)	2	-
3.	ಕೋಲಾರ	1	-
4.	ಬಳ್ಳಾರಿ	3	-
5.	ಚಿತ್ರದುರ್ಗ	-	-
6.	ದಾವಣಗೆರೆ	2	-
7.	ಕೊಪ್ಪಳ	3	-
8.	ಬೆಳಗಾವಿ	13	-
9.	ಬಾಗಲಕೋಟೆ	9	-
10.	ಬಿಜಾಪುರ	14	-
11.	ಮೈಸೂರು	5	-
12.	ಮಂಡ್ಯ	4	-
13.	ಕೊಡಗು	-	-
14.	ಮಂಗಳೂರು	-	-
15.	ಉಡುಪಿ	-	-
16.	ಶಿವಮೊಗ್ಗ	1	-
17.	ಚಿಕ್ಕಮಗಳೂರು	1	-
18.	ಉತ್ತರ ಕನ್ನಡ	1	-
19.	ಚಾಮರಾಜನಗರ	-	-
20.	ಹಾಸನ	7	-
21.	ತುಮಕೂರು	4	-
22.	ಬೀದರ್	3	-
23.	ಗುಲ್ಬರ್ಗಾ	10	-
24.	ರಾಯಚೂರು	-	-
25.	ಧಾರವಾಡ	1	-
26.	ಗದಗ	2	-
27.	ಹಾವೇರಿ	-	-
	ಒಟ್ಟು	86	-

ಅನುಬಂಧ 5

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಸಾಮಿಲ್ ವರ್ಗಾವಣೆಗಾಗಿ ಬಂದಿರುವ ಅರ್ಜಿಗಳ ಸಂಖ್ಯೆ	ಸಾಮಿಲ್‌ಗಳನ್ನು ವರ್ಗಾವಣೆ ಮಾಡಲಾದ ಸಂಖ್ಯೆ
1.	ಬೆಂಗಳೂರು (ನಗರ)	-	-
2.	ಬೆಂಗಳೂರು (ಗ್ರಾಮಾಂತರ)	-	-
3.	ಕೋಲಾರ	2	-
4.	ಬಳ್ಳಾರಿ	-	-
5.	ಚಿತ್ರದುರ್ಗ	-	-
6.	ದಾವಣಗೆರೆ	1	-
7.	ಕೊಪ್ಪಳ	2	-
8.	ಬೆಳಗಾವಿ	15	12
9.	ಬಾಗಲಕೋಟೆ	9	-
10.	ಬಿಜಾಪುರ	-	-
11.	ಮೈಸೂರು	2	-
12.	ಮಂಡ್ಯ	1	-
13.	ಕೊಡಗು	2	2
14.	ಮಂಗಳೂರು	3	3
15.	ಉಡುಪಿ	1	1
16.	ಶಿವಮೊಗ್ಗ	1	-
17.	ಚಿಕ್ಕಮಗಳೂರು	2	-
18.	ಉತ್ತರ ಕನ್ನಡ	1	1
19.	ಚಾಮರಾಜನಗರ	-	-
20.	ಹಾಸನ	8	7
21.	ತುಮಕೂರು	4	1
22.	ಬೀದರ್	3	3
23.	ಗುಲ್ಬರ್ಗಾ	10	9
24.	ರಾಯಚೂರು	4	4
25.	ಧಾರವಾಡ	-	-
26.	ಗದಗ	-	-
27.	ಹಾವೇರಿ	2	-
	ಒಟ್ಟು	73	43